ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1357
ಸದಸ್ಯರ ಹೆಸರು	:	ಶ್ರೀ. ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	09.03.2022.
ಉತ್ತರಿಸುವ ಸಚಿವರು	:	ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಹೊರದೇಶ ಮತ್ತು ಬೇರೆ ರಾಜ್ಯಗಳಿಂದ ಮಕ್ಕಳು ಗುಂಪು ಗುಂಪಾಗಿ ನಮ್ಮ ರಾಜ್ಯದಲ್ಲಿ ಬಂದು ಮದರಸ ಶಿಕ್ಷಣ ಪಡೆಯುತ್ತಿರುವ ಬಗ್ಗೆ ಸರ್ಕಾರದ ನಿಲುವೇನು; ನಮ್ಮ ರಾಜ್ಯದ ಮದರಸಗಳಲ್ಲಿ ಅತೀ ಉನ್ನತ ಮಟ್ಟದ ಶಿಕ್ಷಣ ನೀಡಲಾಗುತ್ತಿದೆಯೇ; ಅಥವಾ ಮೂಲಭೂತವಾದ ಶಿಕ್ಷಣವು ನಮ್ಮ ರಾಜ್ಯದಲ್ಲಿ ಮಾತ್ರ ದೊರೆಯುತ್ತಿದೆಯೇ;	ಹೊರ ದೇಶ ಮತ್ತು ಬೇರೆ ರಾಜ್ಯಗಳಿಂದ ನಮ್ಮ ರಾಜ್ಯದಲ್ಲಿ ಬಂದು ಮದರಸ ಶಿಕ್ಷಣ ಪಡೆಯುವ ಬಗ್ಗೆ ಸಂವಿಧಾನಾತ್ಮಕವಾಗಿ ಯಾವುದೇ ನಿರ್ಬಂಧವಿರುವುದಿಲ್ಲ. ನಮ್ಮ ರಾಜ್ಯದ ಮದರಸಗಳಲ್ಲಿ ಅತೀ ಉನ್ನತ ಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಮೂಲಭೂತವಾದ ಶಿಕ್ಷಣ ನಮ್ಮ ರಾಜ್ಯದಲ್ಲಿ ದೊರೆಯುತ್ತಿಲ್ಲ.
ಆ.	ದೇಶದ ಹಲವಾರು ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾದವರು ಮತ್ತು ಐಸಿಸ್, ತಾಲಿಬಾನ್‌ನಂತಹ ಉಗ್ರ ಸಂಘಟನೆಗಳಲ್ಲಿ ಭಾಗಿಯಾಗುತ್ತಿರುವವರು ಮದರಸ ಶಿಕ್ಷಣ ಪಡೆದವರು ಎಂಬುದರ ಕುರಿತು ಸರ್ಕಾರದ ನಿಲುವೇನು; ರಾಜ್ಯದಲ್ಲಿ ಮದರಸ ಶಿಕ್ಷಣವನ್ನು ನಿರ್ಬಂಧಿಸುವ ಕುರಿತು ಸರ್ಕಾರದ ನಿಲುವೇನು;	ಮದರಸ ಶಿಕ್ಷಣ ಪಡೆದವರು ಉಗ್ರ ಸಂಘಟನೆಗಳಲ್ಲಿ ಭಾಗಿಯಾಗಿದ್ದಲ್ಲಿ ಭಾರತದ ಪ್ರಚಲಿತ ಕಾನೂನಿನ ಅನ್ವಯ ಕ್ರಮ ವಹಿಸಲಾಗುತ್ತದೆ. ರಾಜ್ಯದಲ್ಲಿ ಮದರಸ ಶಿಕ್ಷಣವನ್ನು ನಿರ್ಬಂಧಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಇ.	ಮದರಸ ಶಿಕ್ಷಣ ಸಂಸ್ಥೆಗಳಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು; ಮದರಸ ಶಿಕ್ಷಣದಲ್ಲಿ ಸಣ್ಣ ಸಣ್ಣ ಮಕ್ಕಳಿಗೆ ತಮ್ಮ ದೇವರನ್ನು ಪೂಜಿಸದವರನ್ನು ಕೊಲ್ಲು ಎಂಬುದಾಗಿ ಪಾಠ ಮಾಡುವ ಸಮಯದಲ್ಲಿ ಆ ರೀತಿಯಾಗಿ ಅವರಿಗೆ ವೇತನ ನೀಡುತ್ತಿರುವ ರಾಜ್ಯದ ತೆರಿಗೆದಾರರನ್ನು ಕೊಲ್ಲು ಎಂದಂತಾಗಲಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು?	ಇತರೇ ಶಿಕ್ಷಣ ಸಂಸ್ಥೆಗಳಂತೆ ಮದರಸ ಶಿಕ್ಷಣ ಸಂಸ್ಥೆಗಳಿಂದಲೂ ಸರ್ಕಾರಕ್ಕೆ ಗಣನೀಯ ಆದಾಯವಿರುವುದಿಲ್ಲ. ಮದರಸ ಶಿಕ್ಷಣದಲ್ಲಿ ಸಣ್ಣ ಸಣ್ಣ ಮಕ್ಕಳಿಗೆ ದೇವರನ್ನು ಪೂಜಿಸುವವರಿಗೆ ಕೊಲ್ಲು ಎಂಬುದಾಗಿ ಯಾವುದೇ ಪಾಠ ಮಾಡುತ್ತಿರುವುದಿಲ್ಲ. ಇದು ಆಧಾರ ರಹಿತ ಆಪಾದನೆಯಾಗಿರುತ್ತದೆ, ನೈಜವಾಗಿ ಮದರಸಗಳಲ್ಲಿ ಸಮಸ್ತ ಜನಗಳ ಮಧ್ಯೆ ಸೌಹಾರ್ಧತೆ, ಸಹಬಾಳ್ವೆ ಮತ್ತು ಭಾತೃತ್ವ ಸಂಬಂಧಗಳನ್ನು ಬೆಳೆಸಲು ಪಾಠ ಮಾಡಲಾಗುತ್ತದೆ. ಸರ್ಕಾರದ ವತಿಯಿಂದ ಮದರಸಗಳಿಗೆ ವೇತನ ಇತ್ಯಾದಿ ನೀಡಲಾಗುತ್ತಿರುವುದಿಲ್ಲವಾದ್ದರಿಂದ ತೆರಿಗೆದಾರರನ್ನು ಕೊಲ್ಲು ಎಂದಂತಾಗುವುದಿಲ್ಲ.

ಸಂಖ್ಯೆ: MWD 96 LMQ 2022

(ಶಶಿಕಲಾ ಅ.ಜೊಲ್ಲೆ)
ಮುಜರಾಯಿ, ಹಜ್
ಮತ್ತು ವಕ್ಫ್ ಸಚಿವರು.